**ಸಾಕ್ಷಿಯನ್ನು ದಿನಾಂಕ 13.01.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ವಾದಿಯು ನನಗೆ ಹಲವಾರು ವರ್ಷಗಳಿಂದ ಪರಿಚಯ. ಈ ದಿನ ಸಾಕ್ಷ್ಯ ನುಡಿಯಲು ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿಂದ ನೋಟೀಸ್ ಬಂದಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಟೈಪ್ ಮಾಡಿಸಲಾಗಿರುತ್ತದೆ.

ನಿ.ಪಿ.1 ರ ದಾಖಲೆಗೆ ನ್ಯಾಯಾಲಯದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ.1 ಕ್ಕೆ ನಾನು, ಪಿ.ಡಬ್ಲ್ಯೂ.2, ವಾದಿ ಮತ್ತು ಪ್ರತಿವಾದಿ ಸಹಿ ಮಾಡಿರುತ್ತೇವೆ. ನಿ.ಪಿ.1 ರಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವ್ಯವಹಾರ ಹೊಲ ಮಾರಾಟ ಸಂಬಂಧ ಆಗಿರುತ್ತದೆ. ವ್ಯವಹಾರ ರೂ.36 ಲಕ್ಷಕ್ಕೆ ಆಗಿರುತ್ತದೆ. ಆ ಸಮಯದಲ್ಲಿ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ದಿಃ10-07-2022 ರಂದು ರೂ.7 ಲಕ್ಷ, ದಿಃ15-07-2022 ರಂದು ರೂ.10 ಲಕ್ಷ, ದಿಃ22-08-2022 ರಂದು ರೂ.10 ಲಕ್ಷ ದಿಃ28-09-2022 ರಂದು ರೂ.7 ಲಕ್ಷವನ್ನು ವಾದಿ ಪ್ರತಿವಾದಿಗೆ ಕೊಟ್ಟಿರುತ್ತಾರೆ. ಸದರಿ ಹಣ ರೂ.500/-, 200/- ಮತ್ತು 100/- ಮುಖಬೆಲೆಯ ನೋಟುಗಳಾಗಿದ್ದವು.

ನಿ.ಪಿ.1 ಕ್ಕೆ ನಾವು, ವಾದಿ ಮತ್ತು ಪ್ರತಿವಾದಿ ನ್ಯಾಯಾಲಯದಲ್ಲಿ ಸಹಿ ಮಾಡಿರುತ್ತೇವೆ. ನಿ.ಪಿ.1 ರ 2 ನೇ ಪುಟದ ಕೊನೆಯ ಭಾಗದಲ್ಲಿ ವೈಟನರ್ ಅನ್ನು ಯಾರು ಹಚ್ಚಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಚೆಕ್ ಬಂಧಿ ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಯಾರ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷ್ಯ ನುಡಿಯಲು ವಾದಿ ನನ್ನನ್ನು ಕರೆದಿರುತ್ತಾರೆ. ವಾದಿಯು ನನ್ನ ಸ್ನೇಹಿತನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳುವಂತೆ ವ್ಯವಹಾರ ಆಯಿತು ಎಂದು ಹೇಳುವ ಕಾಲಕ್ಕೆ ಯಾವುದೇ ಹಣ ಕೊಡುವುದು ತೆಗೆದುಕೊಳ್ಳುವುದು ಆಗಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗೆ ಸಾಲ ಕೊಡುವ ಕಾಲಕ್ಕೆ ಅವರಿಂದ ಒಂದು ಖಾಲಿ ಬಾಂಡ್ ಮೇಲೆ ಸಹಿ ಹಾಗೂ ಪ್ರತಿವಾದಿಯ ಸಹಿ ಮಾತ್ರ ಇರುವ 2 ಚೆಕ್ಕುಗಳನ್ನು ಭದ್ರತೆಗಾಗಿ ಪಡೆದುಕೊಂಡಿರುತ್ತೇವೆ ಅಂದರೆ ಸರಿಯಲ್ಲ. ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ,

ಧಾರವಾಡ.